ಶ್ರೀ ಸುನೀಲ್ ವಿ.ಹೆಗಡೆ (ಮಾನ್ಯ ರಮೇಶ ಬಂಡಿಸಿದ್ದೇಗೌಡ ಎ.ಬಿ.ರವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಕೊತ್ತತ್ತಿ 2ನೇ ವೃತ್ತದ ಮಂಡ್ಯ ರಸ್ತೆಯಿಂದ ಮದ್ದೂರು ಗಡಿಯವರೆಗೆ ರಸ್ತೆ ತೀರಾ ಹದಗೆಟ್ಟಿದ್ದು ಆದಷ್ಟು ಬೇಗನೇ ರಸ್ತೆ ಅಭಿವೃದ್ಧಿ ಮಾಡಿಸಿಕೊಡಬೇಕು. ಇದರ ಜೊತೆಗೆ ಎಂ.ಜಿ.ಎಂ. ರಸ್ತೆಯಿಂದ ಬೇಲೂರು ಮಾರ್ಗವಾಗಿ ಯರಳ್ಳಿ ರಸ್ತೆಗಳ ಅಭಿವೃದ್ಧಿಯನ್ನು ಕೂಡ ತೀವ್ರಗತಿಯಲ್ಲಿ ಮಾಡಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ತಮ್ಮ ಮುಖೇನ ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಇಂಜಿನಿಯರ್‌ಗೆ ಈ ಪ್ರಸ್ತಾವನೆಯನ್ನು ಸಲ್ಲಿಸಲು ಸೂಚನೆ ಮಾಡಲಾಗಿದೆ. ಆ ಪ್ರಸ್ತಾವನೆ ಬಂದ ಕೂಡಲೇ ಅನುದಾನದ ಲಭ್ಯತೆಯ ಮೇಲೆ ಅತೀ ಶೀಘ್ರದಲ್ಲಿ ಕೆಲಸ ಮಾಡಿಸಿಕೊಡುತ್ತೇನೆ ಎಂದು ಹೇಳುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು : ಮಾನ್ಯ ಕಾಕಾ ಸಾಹೇಬ ಪಾಟೀಲ್‌ರವರು ಈಗ ಪ್ರಸ್ತುತ ಸದನದಲ್ಲಿ ಹಾಜರಿಲ್ಲ, ಮಾನ್ಯ ಮಂಜು ಎ.ರವರು ಹಾಜರಿಲ್ಲ, ಡಾ: ಶರಣ ಪ್ರಕಾಶ್ ಪಾಟೀಲರವರು ಹಾಜರಿಲ್ಲ, ಮಾನ್ಯ ವೀರಭದ್ರಪ್ಪ ಹಾಲಹರವಿ ಯವರು ಹಾಜರಿಲ್ಲ. ಮಾನ್ಯ ಅಮರೇಶ್ ರವರು ಪ್ರಶ್ನೆ ಕೇಳಿ.

ಮುಳಬಾಗಲು ತಾಲ್ಲೂಕಿನ ರಸ್ತೆ ಅಭಿವೃದ್ಧಿಗೆ ವೆಚ್ಚ ಮಾಡಿದ ಮೊತ್ತ

128 (628) ಶ್ರೀ ಅಮರೇಶ್ (ಮುಳಬಾಗಿಲು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2008–09 ಮತ್ತು 2009ನೇ ಸಾಲಿನಲ್ಲಿ ಮುಳಬಾಗಿಲು ತಾಲ್ಲೂಕಿನಲ್ಲಿ ಎಷ್ಟು ಕಿಮೀ ರಸ್ತೆಯನ್ನು ಅಭಿವೃದ್ಧಿಪಡಿಸಲಾಗಿದೆ. ಇದಕ್ಕಾಗಿ ವೆಚ್ಚ ಮಾಡಿರುವ ಮೊತ್ತ ಎಷ್ಟು;

ಆ) ಈ ತಾಲ್ಲೂಕಿನಲ್ಲಿ ಬಹುಪಾಲು ರಸ್ತೆಗಳು ದುರಸ್ತಿಗೊಳ್ಳದೇ ಸಂಚಾರಕ್ಕೆ ಅಡಚಣೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ;

ಇ) ಹಾಗಿದ್ದಲ್ಲಿ ಈ ರಸ್ತೆಗಳನ್ನು ಆದ್ಯತೆ ಮೇರೆಗೆ ದುರಸ್ತಿ ಮಾಡಿಸಲು ಸರ್ಕಾರ ರೂಪಿಸಿರುವ ಕಾರ್ಯ ಯೋಜನೆಗಳೇನು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) 2008–09ನೇ ಸಾಲಿನಲ್ಲಿ ಮುಳಬಾಗಿಲು ತಾಲ್ಲೂಕಿನಲ್ಲಿ ವಿವಿಧ ಲೆಕ್ಕಶೀರ್ಷಿಕೆಯಡಿಯಲ್ಲಿ ಕೈಗೊಂಡ ರಸ್ತೆ ಕಾಮಗಾರಿಗಳ ವಿವರ:

ಕ್ರ ಸಂ.	ಲೆಕ್ಕಶೀರ್ಷಿಕೆ	ಅಭಿವೃದ್ಧಿ ಪಡಿಸಲಾದ ಉದ್ದ ಕಿಮೀ ಗಳಲ್ಲಿ	ಅಂದಾಜು ಮೊತ್ತ ರೂ. ಲಕ್ಷ ಗಳಲ್ಲಿ	ವೆಚ್ಚ ರೂ. ಲಕ್ಷಗಳಲ್ಲಿ
1	ಸಿ.ಆರ್.ಎಫ್	8.25	135.00	130.79
2	ನಬಾರ್ಡ್	14.56	363.00	159.25
3	ಎಸ್.ಸಿ.ಪಿ ಕಾಮಗಾರಿ	3.19	52.00	52.00
4	ಟಿ.ಎಸ್.ಪಿ ಕಾಮಗಾರಿ	0.75	12.80	12.80
	ಒಟ್ಟು	**26.75**	**562.80**	**354.84**

2009–10ನೇ ಸಾಲಿನಲ್ಲಿ ಮುಳಬಾಗಿಲು ತಾಲ್ಲೂಕಿನಲ್ಲಿ ವಿವಿಧ ಲೆಕ್ಕಶೀರ್ಷಿಕೆಯಡಿಯಲ್ಲಿ ಕೈಗೊಂಡ ರಸ್ತೆ ಕಾಮಗಾರಿಗಳ ವಿವರ:

ಕ್ರ ಸಂ.	ಲೆಕ್ಕಶೀರ್ಷಿಕೆ	ಅಭಿವೃದ್ಧಿ ಪಡಿಸಲು ಯೋಜಿಸಲಾದ ಉದ್ದ ಕಿಮೀ ಗಳಲ್ಲಿ	ಅಂದಾಜು ವೆಚ್ಚ ರೂ. ಲಕ್ಷ ಗಳಲ್ಲಿ	ವೆಚ್ಚ ರೂ. ಲಕ್ಷಗಳಲ್ಲಿ
1	ಸಿ.ಆರ್.ಎಫ್	9.60	100.00	–
2	ನಂಜುಂಡಪ್ಪ ವರದಿ	9.36	118.33	9.55
3	ಸುವರ್ಣ ಯೋಜನೆ	7.70	67.16	4.96
4	ನಬಾರ್ಡ್	12.00	225.00	66.83

5	ಓ.ಆರ್.ಎಫ್	3.85	100.00	–
6	ಎಸ್.ಸಿ.ಪಿ ಕಾಮಗಾರಿ (ಕಾಂಕ್ರೀಟ್ ರಸ್ತೆ)	2.07	77.23	8.00
7	ಟಿ.ಎಸ್.ಪಿ. ಕಾಮಗಾರಿ (ಕಾಂಕ್ರೀಟ್ ರಸ್ತೆ)	0.18	6.43	3.35
	ಒಟ್ಟು	**44.76**	**694.15**	**92.69**

ಆ) ರಾಜ್ಯ ಹೆದ್ದಾರಿಗಳು ಹಾಗೂ ಜಿಲ್ಲಾ ಮುಖ್ಯ ರಸ್ತೆಗಳನ್ನು ಗುಂಡಿ ರಹಿತವಾಗಿ ಇಡಲಾಗಿದೆ.

ರಾಜ್ಯ ಹೆದ್ದಾರಿಗಳು : ಮುಳಬಾಗಿಲು ತಾಲ್ಲೂಕು ವ್ಯಾಪ್ತಿಯಲ್ಲಿ ಒಂದು ರಾಜ್ಯ ಹೆದ್ದಾರಿ ಇದ್ದು 33.30 ಕಿಮೀ ಉದ್ದವಿರುತ್ತದೆ. ಮುಳಬಾಗಿಲು ತಾಲ್ಲೂಕು ಮೂಡಿಗೆರೆ ಮಾರ್ಗವಾಗಿ ಬಾಣಾವರ ಶಿರಾ ಚಿಕ್ಕಬಳ್ಳಾಪುರ ಚಿಂತಾಮಣಿ ಶ್ರೀನಿವಾಸಪುರದಿಂದ ಆಂದ್ರಗಡಿ ಸೇರುವ ರಸ್ತೆ (ರಾಜ್ಯ ಹೆದ್ದಾರಿ 58) 356.50 ರಿಂದ 389.80 ಕಿಮೀ ವರೆಗೆ ಹಾದು ಹೋಗುತ್ತದೆ.

ಮುಳಬಾಗಲು ತಾಲ್ಲೂಕಿನಲ್ಲಿ 33.30 ಕಿಮೀ ನಷ್ಟು ರಾಜ್ಯ ಹೆದ್ದಾರಿ ಇದ್ದು ಪ್ಯಾಕೇಜ್ 2–ಡಿ ರಲ್ಲಿ ಮೂರು ವರ್ಷಗಳ ನಿರ್ವಹಣಾ ಅವಧಿಯು ಸೆಪ್ಟೆಂಬರ್ 2009 ರ ಅಂತ್ಯಕ್ಕೆ ಮುಗಿದಿದ್ದು 101.50 ಲಕ್ಷಗಳ ಅನುದಾನದಲ್ಲಿ 1.78 ಕಿಮೀನಷ್ಟು 5.50 ಮೀ ಅಗಲಕ್ಕೆ ಅಭಿವೃದ್ಧಿಪಡಿಸಿ ಡಾಂಬರೀಕರಣ ಮಾಡಲಾಗಿದ್ದು ಉಳಿದ ಸರಪಳಿಗಳಿಗೆ ಡಾಂಬರು ಹಾಗೂ ಇತರೆ ನಿರ್ವಹಣೆ ಕಾಮಗಾರಿಯನ್ನು ಮಾಡಲಾಗಿದೆ. ಸೆಪ್ಟೆಂಬರ್ 2009ರ ಅಂತ್ಯಕ್ಕೆ ಮೂರು ವರ್ಷಗಳ ನಿರ್ವಹಣಾ ಕಾಮಗಾರಿ ಮುಗಿದಿದ್ದು ಜನವರಿ 2010 ರವರೆಗೆ ಈ ರಸ್ತೆ ನಿರ್ವಹಣೆಗೆ ಲೆಕ್ಕ ಶೀರ್ಷಿಕೆ 3054 ಯೋಜನೆಯಡಿಯಲ್ಲಿ ರೂ. 3.00 ಲಕ್ಷಗಳ ಅನುದಾನದಲ್ಲಿ ರಸ್ತೆಯನ್ನು ಗುಂಡಿ ರಹಿತ ರಸ್ತೆಯನ್ನಾಗಿ ಮಾಡಿ ವಾಹನಗಳ ಸಂಚಾರಕ್ಕೆ ಯೋಗ್ಯವಾಗಿರಿಸಲಾಗಿದೆ. ಈ ರಸ್ತೆಯನ್ನು ರಾಜ್ಯ ಹೆದ್ದಾರಿ 58 ರಿಂದ ರಾ.ಹೆ 234 ಕ್ಕೆ ಮೇಲ್ದರ್ಜೆಗೇರಿಸಿದ್ದು 06–01–2010 ರಂದು ರಾಷ್ಟ್ರೀಯ ಹೆದ್ದಾರಿ ವಲಯಕ್ಕೆ ಹಸ್ತಾಂತರಿಸಲಾಗಿದೆ.

ಜಿಲ್ಲಾ ಮುಖ್ಯ ರಸ್ತೆಗಳು

2008–09ನೇ ಸಾಲಿನಲ್ಲಿ ಮುಳಬಾಗಲು ತಾಲ್ಲೂಕಿನಲ್ಲಿ 345.38 ಕಿಮೀಗಳಷ್ಟು ಜಿಲ್ಲಾ ಮುಖ್ಯ ರಸ್ತೆಗಳಿದ್ದು, ಇದರಲ್ಲಿ ಗುಂಡಿ ಮುಚ್ಚಲು ಲೆಕ್ಕ ಶೀರ್ಷಿಕೆ 3054–12 ನೇ ಹಣಕಾಸು ಯೋಜನೆಯಡಿಯಲ್ಲಿ ರೂ. 93.29 ಲಕ್ಷಗಳ ಅನುದಾನ ಬಿಡುಗಡೆ ಮಾಡಿದ್ದು, ಈ ಅನುದಾನದಲ್ಲಿ 261.11 ಕಿಮೀನಷ್ಟು ಉದ್ದದ ರಸ್ತೆಯನ್ನು ಗುಂಡಿ ರಹಿತ ರಸ್ತೆಯೆನ್ನಾಗಿ ಮಾಡಲಾಗಿದೆ. ಉಳಿಕೆ 84.27 ಕಿಮೀ ಉದ್ದದ ರಸ್ತೆಯಲ್ಲಿ 8.25 ಕಿಮಿ ಉದ್ದದ ರಸ್ತೆಯನ್ನು ವಿವಿಧ ಲೆಕ್ಕ ಶಿರ್ಷಿಕೆಯಡಿಯಲ್ಲಿ ಮೇಲ್ಕಂಡ ವಿವರಗಳಂತೆ ಅಭಿವೃದ್ಧಿ ಗೊಳಿಸಲಾಗಿದೆ.

2009–10ನೇ ಸಾಲಿನಲ್ಲಿ 345.38 ಕಿಮೀಗಳಷ್ಟು ಜಿಲ್ಲಾ ಮುಖ್ಯ ರಸ್ತೆಗಳಲ್ಲಿ 3054–12ನೇ ಹಣಕಾಸು ಯೋಜನೆಯಡಿಯಲ್ಲಿ 34.78 ಲಕ್ಷ ಅನುದಾನದಲ್ಲಿ ಮುಂಗಾರು ಪೂರ್ವ ನಿರ್ವಹಣೆ ಕಾಮಗಾರಿಗಳನ್ನು ನಿರ್ವಹಿಸಲಾಗಿದೆ. ಹಾಗೂ ಲೆಕ್ಕ ಶೀರ್ಷಿಕೆ 3054–12 ನೇ ಹಣಕಾಸು ಯೋಜನೆಯಡಿಯಲ್ಲಿ ರೂ.34.75 ಲಕ್ಷ ಹಾಗೂ 3054 ಯೋಜನೆ ಯಡಿಯಲ್ಲಿ ರೂ.84.50 ಲಕ್ಷಗಳು ಒಟ್ಟು ಅನುದಾನ 119.25 ಲಕ್ಷ ಗಳಲ್ಲಿ 258.92 ಕಿಮೀ ಡಾಂಬರು ತೇಪೆ ಕೆಲಸ ನಿರ್ವಹಿಸಲಾಗಿದೆ. ಉಳಿಕೆ 76.02 ಕಿಮೀಗಳಲ್ಲಿ ಈ ಸಾಲಿನ ವಿವಿಧ ಲೆಕ್ಕ ಶೀರ್ಷಿಕೆಯಡಿಯಲ್ಲಿ ಮೇಲ್ಕಂಡಂತೆ 37.51 ಕಿಮೀನಷ್ಟು ಉದ್ದದ ರಸ್ತೆಯನ್ನು ಅಭಿವೃದ್ಧಿಪಡಿಸಿ ವಾಹನಗಳ ಸಂಚಾರಕ್ಕೆ ಯೋಗ್ಯವಾಗಿರಿಸಿದೆ. ಉಳಿದ ಉದ್ದವನ್ನು ಇತ್ತೀಚೆಗೆ ಮೇಲ್ದರ್ಜೆ ಗೇರಿಸಲಾಗಿದ್ದು, ಈ ಉದ್ದವನ್ನು ಸಹ ಅನುದಾನದ ಲಭ್ಯತೆಗನುಗುಣವಾಗಿ ಅಭಿವೃದ್ಧಿಗೊಳಿಸಲಾಗುವುದು.

ಇ) ದುರಸ್ತಿ ಅವಶ್ಯವಿರುವ ರಸ್ತೆಯನ್ನು ಕೈಗೆತ್ತಿಕೊಂಡು ಅನುದಾನದ ಲಭ್ಯತೆಗನುಗುಣವಾಗಿ ಹಂತ ಹಂತವಾಗಿ ಅಭಿವೃದ್ಧಿಗೊಳಿಸಲಾಗುವುದು.

ಶ್ರೀ ಅಮರೇಶ್ (ಮುಳಬಾಗಿಲು) : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಲಾಗಿದೆ. ಆದರೆ, ನಾವು ಕೇಳಿರತಕ್ಕಂತಹ ಎಲ್ಲಾ ಶೀರ್ಷಿಕೆಗಳಲ್ಲಿ ಯಾವ್ಯಾವ ಕಾಮಗಾರಿಗಳನ್ನು ತೆಗೆದುಕೊಂಡಿದ್ದೀರಿ ಹಾಗೂ ಎಷ್ಟು ಅನುದಾನ ಪೆಂಡಿಂಗ್ ಇದೆ ಎನ್ನುವುದನ್ನು ಸಹ ನಾವು ಹೇಳಿದ್ದೇವೆ. ಆದರೆ, ಈಗ 3054 ಲೆಕ್ಕ ಶಿರ್ಷಿಕೆಯಡಿಯ ಕಾಮಗಾರಿಗಳನ್ನು ಇಡೀ ರಾಜ್ಯದಲ್ಲಿ ನಿಲ್ಲಿಸಿದ್ದಾರೆ. ಅದರಲ್ಲಿ ಇವತ್ತು ನಮ್ಮ ತಾಲ್ಲೂಕಿನ ಸುಮಾರು 233.10 ಲಕ್ಷ

ರೂಪಾಯಿಗಳ ಕಾಮಗಾರಿ ಕೂಡ ಪೆಂಡಿಂಗ್ ಇದೆ. ಅದೇ ರೀತಿ ಎಲ್ಲಾ ಇಲಾಖೆಗಳ ಹೆಡ್‌ಗಳಲ್ಲಿಯೂ ಕೂಡ, 5054 12th Finance ನಲ್ಲೂ ಕೂಡ ಸುಮಾರು 18.50 ಲಕ್ಷ ರೂಪಾಯಿಗಳ ಕಾಮಗಾರಿ ಕೂಡ ಪೆಂಡಿಂಗ್ ಇದೆ. ಅದರಲ್ಲಿ SCP ಕಾಮಗಾರಿಗಳಲ್ಲೂ ಕೂಡ ಈಗಾಗಲೇ ಒಟ್ಟು 562.80 ಲಕ್ಷ ರೂಪಾಯಿಗಳ ಕಾಮಗಾರಿಯನ್ನು ತೆಗೆದುಕೊಂಡಿದ್ದು, ಇದರಲ್ಲಿ 300.54 ಅನುದಾನವನ್ನು ಬಿಡುಗಡೆ ಮಾಡಿದ್ದಾರೆ. ಮಾನ್ಯ ಸಚಿವರು ಇದರ ಬಗ್ಗೆ ಹೆಚ್ಚಿಗೆ ಮಾಹಿತಿಯನ್ನು ಕೊಡಬೇಕು. ಅದೇ ರೀತಿ ಈಗ ಇರತಕ್ಕಂತಹ ಕಾಮಗಾರಿಗಳಿಗೆ ಸುಮಾರು 694.15 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಬೇಕಾಗಿದೆ. ಅದನ್ನೂ ಕೂಡ 92ಕ್ಕೆ ಮುಗಿಸಿ ಈ ಅನುದಾನವನ್ನು ಕೂಡ ಕಡಿತಗೊಳಿಸಿದ್ದಾರೆ. ದಯವಿಟ್ಟು ಈ ಅನುದಾನವನ್ನು ಶೀಘ್ರದಲ್ಲೇ ಬಿಡುಗಡೆ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಬೇಡಿಕೊಳ್ಳುತ್ತಾ, ಇನ್ನೊಂದು ವಿಷಯವೇನೆಂದರೆ,

ಅಧ್ಯಕ್ಷರು : ಆಯಿತು. ಪ್ರಶ್ನೆ ಕೇಳಿ ಸಾಕು.

ಶ್ರೀ ಅಮರೇಶ್ : ಮಾನ್ಯ ಅಧ್ಯಕ್ಷರೆ, ನಾನು ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಈಗಾಗಲೇ National Highway ಯನ್ನು ಕೂಡ ಮೇಲ್ದರ್ಜೆಗೇರಿಸಿದ್ದೇವೆ ಎಂದು ಹೇಳುತ್ತಾರೆ. ಈಗ ಏನು ಮೇಲ್ದರ್ಜೆಗೇರಿಸಿದ್ದೀರಿ ಅದನ್ನು immediate ಆಗಿ ನಮ್ಮ ತಾಲ್ಲೂಕಿನಲ್ಲಿ ಕೆಲಸಗಳನ್ನು ಪೂರ್ಣಗೊಳಿಸಬೇಕು ಎಂದು ಈ ಸಂದರ್ಭದಲ್ಲಿ ನಾನು ಕೇಳಬಯಸುತ್ತೇನೆ.

ಶ್ರೀ ಸಿ.ಎಂ.ಉದಾಸಿ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾರ್ಚ್ 31 ರವರೆಗೆ ಈಗ ಆಗಿರುವಂತಹ ಕೆಲಸಕ್ಕೆ ಹಣ ಬಿಡುಗಡೆ ಮಾಡುವಂತಹ ಪ್ರಯತ್ನವನ್ನು ಮಾಡುತ್ತೇವೆ. ಏಕೆಂದರೆ, ಮೊದಲನೇ ಹಂತದಲ್ಲಿ ಅವರಿಗೆ 562 ಲಕ್ಷ ರೂಪಾಯಿಗಳಿಗೆ 354 ಲಕ್ಷ ರೂಪಾಯಿಗಳು ಬಿಡುಗಡೆಯಾಗಿದೆ ಎಂದು ಹೇಳಿದ್ದಾರೆ. ಉಳಿದ ಹಣವನ್ನು ಬಿಡುಗಡೆ ಮಾಡುವಂತಹ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಇದರ ಜೊತೆಗೆ 694 ಲಕ್ಷ ರೂಪಾಯಿಗಳ ಶಿರ್ಷಿಕೆಯಡಿಯಲ್ಲಿ ಬಂದಿರುವಂತಹ ವಿವರಗಳಿಗೆ 92 ಲಕ್ಷ ರೂಪಾಯಿಗಳು ಖರ್ಚಾಗಿದೆ ಎಂದು ಹೇಳಿದ್ದಾರೆ. ಹಣ ಬಿಡುಗಡೆಯಾಗಿದೆ. ಆದರೆ, ಆ ವೆಚ್ಚವಾಗಿರುವ ಬಿಲ್‌ಗಳು ಸಬ್‌ಮಿಟ್ ಆಗಿರುವ ಪ್ರಕಾರ ಹಣವನ್ನು ಬಿಡುಗಡೆ ಮಾಡುವಂತಹ ಕೆಲಸವನ್ನು ಮಾಡುತ್ತೇವೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ಅವರಿಗೆ ಇರುವಂತಹ ಅನುಮಾನಗಳೇನೆಂದರೆ, ರಾಜ್ಯ

ಹೆದ್ದಾರಿ–58 ರಾಷ್ಟ್ರೀಯ ಹೆದ್ದಾರಿಯಾಗಿ ಪರಿವರ್ತನೆಯಾದ ಮೇಲೆ ಅದಕ್ಕೆ ಹಣ ಬಿಡುಗಡೆಯಾಗುವುದು ವಿಳಂಬವಾಗಬಹುದು ಎಂಬ ಅರ್ಥದಲ್ಲಿ ಅವರು ಪ್ರಶ್ನೆ ಕೇಳಿರಬೇಕು. ಆದರೆ, ರಾಷ್ಟ್ರೀಯ ಹೆದ್ದಾರಿಗೆ ಸಂಬಂಧಿಸಿದಂತಹ ಕೇಂದ್ರ ಸಚಿವರ ಗಮನಕ್ಕೆ ತಂದು ಕೆಲಸ ಮಾಡಿಸುವಂತಹ ಪ್ರಯತ್ನ ಮಾಡುತ್ತೇವೆ.

ಶ್ರೀ ಅಮರೇಶ್ : ಮಾನ್ಯ ಅಧ್ಯಕ್ಷರೆ, ಇನ್ನೊಂದು ವಿಷಯ ವೇನೆಂದರೆ, 3054 ಲೆಕ್ಕ ಶೀರ್ಷಿಕೆಯಡಿ ಬೇಕಾದಷ್ಟು ಹಣವಿದ್ದು, ಅದನ್ನು ಬಿಡುಗಡೆ ಮಾಡಿಲ್ಲ. ದಯವಿಟ್ಟು ಆ ಹಣವನ್ನು ಬಿಡುಗಡೆ ಮಾಡಿಸಿ ಕೊಡಬೇಕು.

ಶ್ರೀ ಸಿ.ಎಂ. ಉದಾಸಿ : ಆಯಿತು ಮಾಡಿಸುತ್ತೇವೆ.

ಅಧ್ಯಕ್ಷರು : ಮಾನ್ಯ ಡಿ.ಕೆ. ಶಿವಕುಮಾರ್‌ರವರು ಈಗ ಪ್ರಸ್ತುತ ಸದನದಲ್ಲಿ ಹಾಜರಿಲ್ಲ, ಮಾನ್ಯ ದೊಡ್ಡಪ್ಪಗೌಡ ಶಿವಲಿಂಗಪ್ಪಗೌಡ ಪಾಟೀಲ್ ರವರು ಹಾಜರಿಲ್ಲ, ಮಾನ್ಯ ಬಾಲಕೃಷ್ಣ ಹೆಚ್.ಸಿ.ಯವರ ಪರವಾಗಿ ಕೆ.ರಾಜುರವರು ಪ್ರಶ್ನೆ ಕೇಳುತ್ತಾರೆ.

ಮಾಗಡಿ ತಾಲ್ಲೂಕಿನ ಹೆದ್ದಾರಿ 3 ರಲ್ಲಿ ಮಾಗಡಿಯಿಂದ ಗುಡೇಮಾರನಹಳ್ಳಿ ರಸ್ತೆ ಅಭಿವೃದ್ಧಿ

13 (798) ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿ ತಾಲ್ಲೂಕಿನಲ್ಲಿ ಹಾದು ಹೋಗುವ ರಾಜ್ಯ ಹೆದ್ದಾರಿ–3 ರಲ್ಲಿ ಮಾಗಡಿಯಿಂದ–ಗುಡೇಮಾರನಹಳ್ಳಿ ವರೆಗಿನ ರಸ್ತೆ ತುಂಬಾ ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ರಸ್ತೆಯ ಮೇಲ್ಸ್ತ್ಯನ ಗುಂಡಿ ಮುಚ್ಚಲು 7(ಏಳು) ಲಕ್ಷ ಅನುದಾನ ಬಿಡುಗಡೆ ಮಾಡಲಾಗಿದೆ ಹಾಗೂ ಶೀಘ್ರವೇ ಡಾಂಬರೀಕರಣ ಕೈಗೆತ್ತಿಕೊಳ್ಳಲಾಗುವುದೆಂಬ ಆಶ್ವಾಸನೆ ನೀಡಿದ್ದರೂ ಸಹಾ ಯಾವುದೇ ಕೆಲಸ ಮಾಡಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈ ರಸ್ತೆಯ ಪರಿಸ್ಥಿತಿಯ ಬಗ್ಗೆ ಕಳೆದ ವರ್ಷವೇ ಸಂಬಂಧಪಟ್ಟ ಸಚಿವರ ಖುದ್ದು ಭೇಟಿ ಮಾಡಿಸಿ ತಕ್ಷಣವೇ ಡಾಂಬರೀಕರಣ ಮಾಡಿ